ಬ್ಲೂಬೆರ್‍ರಿಗೆ ಹೋಗಿದ್ಯಂತೆ' ಅಂದೆ. ಉದಾಸವಾಗಿ 'ಹೂಂ... ಪಾರ್ವತಿಯ ಮಗಳು ಪಿ.ಯು.ಸಿನಲ್ಲಿ ಡಿಸ್ಟಿಂಕ್ಷನ್ ಬಂದಳಲ್ಲ, ಹಂಗಾಗಿ ಒಂದು ಪಾರ್ಟಿ ಕೊಟ್ಟಳು. ಎಲ್ಲಾರೂ ಹೋಗಿದ್ದೆವು' ಅಂದಳು. 'ಮತ್ತೆ... ಒಬ್ಬಳೆ ಇದ್ಯಂತಲ್ಲ' ಅಂತ ಕೆಣಕಿದಾಗ, 'ಅಯ್ಯೋ ಬಂದವರು ಹೊರಟುಬಿಟ್ಟಿದ್ರು, ಲೌಂಜಿಗೆ ಬಂದಾಗ ನನಗೆ ಮೊಬೈಲ್ ಬಿಟ್ಟು ಬಂದಿರೋದು ಜ್ಞಾಪಕಬಂತು. ಹಾಗಾಗಿ ಒಬ್ಬಳೇ ವಾಪಸ್ ಓಡಿಹೋಗಿ ತಂದೆ' ಅಂದಳು. ಅವಳು ನಿಜಕ್ಕೂ ತುಂಬಾ ಒಳ್ಳೆಯವಳು; ಅವಳೇನೇ ಮಾಡಿದರೂ ಅದಕ್ಕೊಂದು ಕಾರಣವಿರುತ್ತದೆ. ಹಾಗೆಂದೇ ನನ್ನ ನಂಬಿಕೆ. ಎಷ್ಟೋ ವೇಳೆ ಎತ್ತರದ ಚಿನ್ನದ ಹೊಳಪು ನಾರಿಯರನ್ನು ಒಂದುಮೆಟ್ಟಲು ಕೆಳಗಿಳಿಯುವಂತೆ ಮಾಡುತ್ತದೆ. ಚಿನ್ನ ಯಾವತ್ತೂ ಎತ್ತರದಲ್ಲಿ ತೂಗುತ್ತಿರುತ್ತದೆ. ಎತ್ತರದ್ದನ್ನು ನಿಲುಕಿಸಿಕೊಳ್ಳಲು ಎಲ್ಲರೂ ಒಂದು ಹಂತ ಮೇಲಕ್ಕೇರಬೇಕು. ಆದರೆ ಚಿನ್ನಕ್ಕೆ ಮಾತ್ರ ವಿಶೇಷ ಶಕ್ತಿ ಇದೆ. ಅದು ತನ್ನ ಮೇಲಿನ ಮೋಹಕ್ಕಾಗಿ ಮನುಷ್ಯರನ್ನು, ಅದರಲ್ಲೂ ಹೆಂಗಸರನ್ನು ಒಂದು ಹಂತ ಕೆಳಗಿಳಿಸಿಬಿಡುತ್ತದೆ!

ಇದೊಂದು ಆಗದಿದ್ದರೆ...

ಈಗ್ಗೆ ಒಂಬತ್ತು ದಿನಗಳ ಹಿಂದೆ ಅವಳು ಮಾಮೂಲಿಯಂತೆ ಎಂಟುಗಂಟೆಗೆಲ್ಲ ಆಫೀಸಿಗೆ ಹೋದಳು. ಈಗವಳು ತನ್ನ ಹೋಂಡಾ ಆಕ್ಟಿವದಲ್ಲಿ ಹೋಗುತ್ತಿದ್ದಳು. ನಾನೂ ಮಾಮೂಲಿನಂತೆ ಆಫೀಸಿಗೆ ಬಂದಿದ್ದೆ. ಸಂಜೆ ಐದೂವರೆಗೆ ನನಗೆ ಫೋನ್ ಬಂತು. 'ಸರ್... ನೀವ್ಯಾರೋ ನಂಗೊತ್ತಿಲ್ಲ. ಈ ಫೋನಿನ ಮೇಡಮ್‌ಗೆ ಆಕ್ಸಿಡೆಂಟಾಗಿದೆ. ಇಲ್ಲೇ ಅನುರಾಗ್ ಟವರ್ಸ್ ಎದುರಿನ ಸಿಗ್ನಲ್‌ನಲ್ಲಿ. ಸ್ಪಾಟ್‌ಡೆತ್ತಾಗಿದೆ. ಅವ್ರ ಫೋನ್ ತಗೊಂಡು ಕಾಲ್‌ಲಾಗ್ ನೋಡಿ ಫೋನ್ ಮಾಡಿದೆ. ಮೂರು ಫೋನ್‌ಗೆ ಕಾಲ್ ಮಾಡಿದ್ರೂ ಅವರು ನಮ್ಗೆ ಇವ್ರು ಗೊತ್ತಿಲ್ಲ ಅಂದ್ರು. ನಿಮ್ಗೇನಾರು ಇವ್ರು ಗೊತ್ತಾ ಸಾರ್?' ಅಂದರು. ಎದೆತಲ್ಲಣಿಸಿ ತಲೆಯೊಳಗೆ ಧಿಮಿ–ಧಿಮಿ. ನನ್ನನ್ನು ನಾನು ಸಾವರಿಸಿಕೊಳ್ಳಲೂ ಆಗಲಿಲ್ಲ. ಸಹೋದ್ಯೋಗಿಗಳು ಸಹಾಯಕ್ಕೆ ನಿಂತರು.

ಮುಖದ ಮುಗುಳ್ನಗು ಮಾಸದಂತೆ ಸತ್ತು ಬಿದ್ದಿದ್ದಳು. ಮಹಜರು ಮುಗಿದು ಪೋಸ್ಟ್‌ಮಾರ್ಟಮಿಗೆ ಸಾಗಿಸಿದರು. ಮಾರನೆ ಬೆಳಗ್ಗೆ ಹೆಣ ಪೋಸ್ಟ್‌ಮಾರ್ಟಮ್ ಆಗಿ ಅದರ ರಿಪೋರ್ಟ್ ಬಂತು. ಎಲ್ಲವೂ ಸರಿಯಾಗಿತ್ತು.

ಇದೊಂದು ಆಗದಿದ್ದರೆ...

ಕುತೂಹಲದಿಂದ ರಿಪೋರ್ಟ್ ಓದಿದೆ. ಮೃತರು ಸುಮಾರು 40 ವಯಸ್ಸಿನ ಮಹಿಳೆಯಾಗಿದ್ದು, ಹಿಂದಿನಿಂದ ಗಾಡಿಗೆ ಬಿದ್ದ ಒತ್ತಡಕ್ಕೆ ನಿಯಂತ್ರಣ ತಪ್ಪಿ ಬಿದ್ದಿದ್ದಾರೆ. ಬೆನ್ನು ಹುರಿಗೆ ತೀವ್ರ ಏಟಾಗಿ ಅಲ್ಲೇ ಪ್ರಾಣಹೋಗಿದೆ. ಮೃತರು ಮಧ್ಯಾಹ್ನ ಸೇವಿಸಿದ ರೊಟ್ಟಿ, ಪನೀರಿನ ತುಣುಕುಗಳು ಕರುಳಿನಲ್ಲಿ ಇವೆ. ವ್ಯಕ್ತಿಯು ಸಾಯುವ ಎರಡು ಗಂಟೆ ಮುಂಚೆ ಸಂಭೋಗಕ್ಕೆ ಒಳಗಾಗಿದ್ದಾರೆ. ರೇತಸ್ಸಿನ ಕಣಗಳು ಗುಪ್ತಾಂಗದಲ್ಲಿ ಇವೆ.

ಇದೊಂದು ಆಗದಿದ್ದರೆ...

## ಉಷಾ ನರಸಿಂಹನ್

ಕತೆಗಾರ್ತಿ ಉಷಾ ಮೈಸೂರಿನವರು. ನಾಲ್ಕು ಕಾದಂಬರಿ, ನಾಲ್ಕು ಕಥಾಸಂಕಲನ, ನಾಲ್ಕು ನಾಟಕ, ಮೂರು ಕವನ ಸಂಕಲನ, ಒಂದು ಪ್ರಬಂಧ ಸಂಕಲನ ಸೇರಿದಂತೆ 15ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.